# ಮುಸ್ತಾಂಗ್

ಮುಸ್ತಾಂಗ್ ಜನಾಂಗದವರು ಪ್ರಾದೇಶಿಕವಾಗಿ ನೇಪಾಳಿಗಳು, ಸಾಂಸ್ಕೃತಿಕವಾಗಿ ಟಿಬೆಟಿಯನ್‌ಗಳು! ಅಂದರೆ ಅವರ ಭಾಷೆ, ಸಂಸ್ಕೃತಿ ಎಲ್ಲವೂ ಟಿಬೆಟಿಯನ್. ಆದರೆ ನೇಪಾಳದ ನಿವಾಸಿಗಳು. 1991ರವರೆಗೂ ಹೊರಜಗತ್ತಿನವರಿಗೆ ತಮ್ಮ ಸಮುದಾಯ ಪ್ರದೇಶದ ಒಳಗೆ ಪ್ರವೇಶಿಸಲು ಮುಸ್ತಾಂಗ್ ಜನಾಂಗದವರು ಬಿಡುತ್ತಿರಲಿಲ್ಲ. ಮುಸ್ತಾಂಗ್‌ನ ಜನಾಂಗದಲ್ಲಿ ಹುಟ್ಟುವ ಮೊದಲ ಎರಡು ಮಕ್ಕಳು ಏನು ಮಾಡಬೇಕು ಎನ್ನುವುದು ಮೊದಲೇ ನಿರ್ಧರಿತವಾಗಿರುತ್ತದೆ! ಹಿರಿಯ ಮಗ ಭೂಮಿಯನ್ನು ನೋಡಿಕೊಂಡು ಕೃಷಿ ಮಾಡಬೇಕು. ಎರಡನೇ ಮಗ ಬೌದ್ಧ ಸನ್ಯಾಸಿ ಆಗಬೇಕು! ಇದು ಕಡ್ಡಾಯ.

ಅಮೆ ಪಾಮ್ ಎಂಬ ವ್ಯಕ್ತಿ 1350ರಿಂದ 1380ರ ನಡುವೆ ಈ ಜನಾಂಗವನ್ನು ಹೊರಜಗತ್ತಿಗೆ ಪರಿಚಯಿಸಿದ ಎಂದು ಹೇಳಲಾಗುತ್ತದೆ.

ನೇಪಾಳದ ಮುಸ್ತಾಂಗ್ ಎಂಬ ಪ್ರದೇಶದಲ್ಲಿಯೇ ವಾಸವಾಗಿರುವ ಈ ಜನಾಂಗದಲ್ಲಿ ತೀರಾ ಇತ್ತೀಚೆಗಿನವರೆಗೂ ರಾಜರ ಆಳ್ವಿಕೆ ಜಾರಿಯಲ್ಲಿತ್ತು. ಈಗಲೂ ಅವರ ಸಮುದಾಯಕ್ಕೆ ರಾಜವಂಶಸ್ಥರಿಗೆ ವಿಶೇಷ ಸ್ಥಾನಮಾನವಿದೆ. ಕಾಳಿ ಗಂಡಕೀ ನದಿಯ ಕಣಿವೆಯಲ್ಲಿ ಎರಡು ಜಾಗಗಳಲ್ಲಿ ವಾಸಿಸುತ್ತಿರುವ ಮುಸ್ತಾಂಗರು ಪ್ರಾಚೀನ ಟಿಬೆಟಿಯನ್ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ.

2,600 ಜನಸಂಖ್ಯೆ ಹೊಂದಿರುವ ಈ ಸಮುದಾಯದಲ್ಲಿ ಹೆಂಗಸರು ಹಲವು ಗಂಡಂದಿರನ್ನು ಹೊಂದಿರುತ್ತಾರೆ. ಭೂಮಿಯನ್ನೇ ನೆಚ್ಚಿಕೊಂಡು ಬದುಕುತ್ತಿರುವ ಈ ಜನರಲ್ಲಿ ಬಡವರು ಕಮ್ಮಿ. ಆಧುನಿಕ ಜಗತ್ತಿನೊಂದಿಗೆ ತೀರಾ ಇತ್ತೀಚೆಗಿನವರೆಗೂ ಬೇರೆಯಾಗಿಯೇ ಇದ್ದ ಇವರು ಈಗ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗುತ್ತಿದ್ದಾರೆ. ಮೋಟಾರ್‌ಸೈಕಲ್‌ಗಳು, ರಸ್ತೆಗಳು ಊರನ್ನು ಹೊಕ್ಕಿವೆ. ಆಧುನಿಕ ಜಗತ್ತಿನೊಂದಿಗೆ ವ್ಯವಹಾರ ಮಾಡುವ ವ್ಯಾಮೋಹ ಬೆಳೆಸಿಕೊಳ್ಳುತ್ತಿದ್ದಾರೆ.

# ಹಮರ್



ಇಥಿಯೋಪಿಯಾದ ಒಮೊ ನದಿ ಕಣಿವೆಯಲ್ಲಿನ ಹಮರ್ ಎಂಬ ಬುಡಕಟ್ಟು ಜನಾಂಗವನ್ನು ಹಮೆರ್ ಎಂದೂ ಕರೆಯುವುದುಂಟು. ಬೇಟೆ ಅವರ ಮುಖ್ಯ ಉದ್ಯೋಗ. ಉಳಿದ ಬುಡಕಟ್ಟು ಜನಾಂಗಗಳೊಡನೆ ಬಟ್ಟೆ, ಆಹಾರ, ಜಾನುವಾರುಗಳ ವಿನಿಮಯ ನಡೆಸುತ್ತಾರೆ.

‘ಗೂಳಿ ಜಿಗಿತ’ ಈ ಜನಾಂಗದ ವಿಶಿಷ್ಟ ಆಚರಣೆ. ಬಾಲಕ ಪ್ರಬುದ್ಧಾವಸ್ಥೆಗೆ ಬಂದಿರುವುದರ ಸೂಚನೆಯ ರೂಪದಲ್ಲಿ ಈ ಸಂಪ್ರದಾಯ ಆಚರಿಸಲಾಗುತ್ತದೆ. ಆರಂಭದಲ್ಲಿ ಗೂಳಿ ಜಿಗಿತ ಮಾಡುವ ಹುಡುಗನ ಸುತ್ತ ಕೆಲವು ಹುಡುಗಿಯರು ವಾದ್ಯಗಳನ್ನು ಊದುತ್ತ ಕುಣಿಯುತ್ತಾರೆ. ಅವರಿಗೆ ಹುಡುಗ ಚಾವಟಿಯಲ್ಲಿ ಜೋರಾಗಿ ಹೊಡೆಯುತ್ತಾನೆ. ಅವನ ಹೊಡೆತಕ್ಕೆ ಯಾವ ಹುಡುಗಿ ಬೆಚ್ಚುವುದಿಲ್ಲವೋ ಆ ಹುಡುಗಿಯನ್ನೇ ಅವನು ಮದುವೆಯಾಗಬೇಕು. ಚಾವಟಿ ಹೊಡೆತದ ಆಚರಣೆ ಮುಗಿದ ಮೇಲೆ ಆ ಹುಡುಗನನ್ನು ಕೂಡಿಸಿಕೊಂಡು ಮುಖಕ್ಕೆ ಸಾಂಪ್ರದಾಯಿಕವಾಗಿ ಬಣ್ಣವನ್ನು ಬಳಿದು ಅಲಂಕಾರ ಮಾಡಲಾಗುತ್ತದೆ. ನಂತರ ಮೂರು ನಾಲ್ಕು ಗೂಳಿಗಳನ್ನು ಅಡ್ಡಡ್ಡ ನಿಲ್ಲಿಸಿ ಅದರ ಬೆನ್ನಮೇಲೆ ಕಾಲಿಟ್ಟು ಆಚೆ ಜಿಗಿಯುವಂತೆ ಹೇಳಲಾಗುತ್ತದೆ. ಹೀಗೆ ಕನಿಷ್ಠ ನಾಲ್ಕು ಸಲ ಜಿಗಿಯಬೇಕು. ಜಿಗಿಯುವಲ್ಲಿ ವಿಫಲನಾಗುವುದು ತೀರಾ ಅವಮಾನ.

2003ರ ವರದಿಯ ಪ್ರಕಾರ ಹಮರ್ ಜನಾಂಗದ ಜನಸಂಖ್ಯೆ 46 ಸಾವಿರ. ಅವರಲ್ಲಿ ಸುಮಾರು ಹತ್ತು ಸಾವಿರ ಜನರು ಜೀವನೋಪಾಯಕ್ಕಾಗಿ ಪಟ್ಟಣಗಳಿಗೆ ವಲಸೆ ಹೋಗಿದ್ದಾರೆ. 42 ಸಾವಿರ ಜನರು ಮಾತ್ರ ಈಗಲೂ ಹಮೆರ್ ಭಾಷೆಯನ್ನು ಮಾತನಾಡುತ್ತಾರೆ.



# ಹುಲಿ

ಹುಲಿ – ಇದು ನಮ್ಮ ಬನ್ನೇರುಘಟ್ಟದಲ್ಲಿನ ಹುಲಿಯಲ್ಲ. ಪಾಪುಅ ನ್ಯೂಗಿನಿ ಎಂಬ ಒಷ್ಯಾನಿಯಾದ ಒಂದು ಪುಟ್ಟ ದೇಶದಲ್ಲಿ ಇರುವ ಬುಡಕಟ್ಟು ಜನಾಂಗದ ಹೆಸರು. ಆಸ್ಟ್ರೇಲಿಯಾ ಖಂಡದ ಉತ್ತರದಲ್ಲಿರುವ ಪೆಸಿಫಿಕ್ ಸಮುದ್ರದ ಕೆಲವು ದ್ವೀಪಪ್ರದೇಶಗಳು ಸೇರಿ ಪಾಪ್ಯುಅ ನ್ಯೂಗಿನಿ ದೇಶ ಆಗಿದೆ. ಸುಮಾರು 60 ಲಕ್ಷ ಜನಸಂಖ್ಯೆ ಇರುವ ಈ ದೇಶದಲ್ಲಿ 850ಕ್ಕೂ ಅಧಿಕ ಭಾಷೆಗಳನ್ನು ಮಾತನಾಡುವ ಜನರು ಇದ್ದಾರಂತೆ! ಅವರಲ್ಲಿ ಹುಲಿ ಬುಡಕಟ್ಟು ಜನಾಂಗವೂ ಒಂದು.

ಪಾಪ್ಯುಅ ನ್ಯೂಗಿನಿಯ ‘ಹೇಲಾ’ ಎಂಬ ಪ್ರದೇಶದಲ್ಲಿ ವಾಸವಾಗಿರುವ ಈ ಜನಾಂಗದಲ್ಲಿ, ಕುಟುಂಬದ ಜವಾಬ್ದಾರಿಯನ್ನು ಹೆಚ್ಚಾಗಿ ಹೆಂಗಸರೇ ಹೊತ್ತುಕೊಳ್ಳುತ್ತಾರೆ. ಗಂಡಸರು ಬೇಟೆಪ್ರಿಯರು. ಹುಲಿ ಜನಾಂಗದ ಪುರುಷರು ತಲೆಗೆ ಪುಟ್ಟ ಬುಟ್ಟಿಯಾಕಾರದ ಟೋಪಿ ಧರಿಸಿಕೊಳ್ಳುತ್ತಾರೆ. ವಿಶೇಷವೆಂದರೆ ಆ ಟೋಪಿಯನ್ನು ಅವನದೇ ಕೂದಲಿನಿಂದ ಮಾಡಲಾಗುತ್ತದೆ! ಗುಡಿಸಲುಗಳನ್ನು ಕಟ್ಟಿಕೊಂಡು, ಅದರ ಸುತ್ತಲೂ ಸಣ್ಣಪ್ರಮಾಣದಲ್ಲಿ ವ್ಯವಸಾಯವನ್ನೂ ಮಾಡಿಕೊಂಡು ಬದುಕುವ ಇವರು ಮಾತನಾಡುವುದೂ ಹುಲಿ ಭಾಷೆಯನ್ನೇ. ಕೆಲವು ಲಕ್ಷಗಳಷ್ಟು ಜನಸಂಖ್ಯೆ ಹೊಂದಿರುವ ಹುಲಿ ಜನಾಂಗ, ಈಗಲೂ ತಮ್ಮ ಪಾರಂಪರಿಕ ಜೀವನಕ್ರಮವನ್ನು ಬಹುತೇಕ ಉಳಿಸಿಕೊಂಡಿದ್ದಾರೆ. ಇತ್ತೀಚೆಗಷ್ಟೇ ಆಧುನಿಕ ಜಗತ್ತಿಗೆ ನಿಧಾನವಾಗಿ ತೆರೆದುಕೊಳ್ಳುತ್ತಿದ್ದಾರೆ.